ದಿನಾಂಕ **31.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ವಕೀಲರಿಂದಃ-</u>**

ನಾನು ಈ ದಾವೆಯಲ್ಲಿ **10**ನೇ ಪ್ರತಿವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ಪೂರಕವಾಗಿ ಸಾಕ್ಷ್ಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿದ್ದು, ಅವುಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿವೆ.

ದಿನಾಂಕ **30.03.1976** ರ ನೋಂದಾಯಿತ ವಿಭಾಗಪತ್ರ ದೃಡೀಕೃತ ನಕಲನ್ನು ನಿ.ಡಿ **5** ಎಂದು**,** ಅಸಲು ದಾವಾ ಸಂಖ್ಯೆ **36/2015** ರ ತೀರ್ಪು ಮತ್ತ ಡಿಕ್ರಿಯ ದೃಡೀಕೃತ ನಕಲನ್ನು ನಿ.ಡಿ **6** ಮತ್ತು **7** ಎಂದು**,** ಅಸಲು ದಾವಾ ಸಂಖ್ಯೆ **66/2017** ರ ವಾದಪತ್ರದ ದೃಡೀಕೃತ ನಕಲನ್ನು ನಿ.ಡಿ **8** ಎಂದು**,** ಸಿ.ಆರ್.ಸಿ ಪ್ರಮಾಣಪತ್ರದ ದೃಡೀಕೃತ ನಕಲನ್ನು ನಿ.ಡಿ **9** ಎಂದು**,** ಕಂದಾಯ ನಿಗದಿ ದಾಖಲೆಯ ದೃಡೀಕೃತ ನಕಲನ್ನು ನಿ.ಡಿ **10** ಎಂದು**,** ಸ್ಕೆಚ್ ನ ದೃಡೀಕೃತ ನಕಲುಗಳನ್ನು ನಿ.ಡಿ **11** ಮತ್ತು **12** ಎಂದು**,** ಕಂದಾಯ ತಖ್ತೆಯ ದೃಡೀಕೃತ ನಕಲನ್ನು ನಿ.ಡಿ **13** ಎಂದು**,** ದಿನಾಂಕ **07.05.1980** ರ ಸ್ವೀಕೃತಿಯ ದೃಡೀಕೃತ ನಕಲನ್ನು ನಿ.ಡಿ **14** ಎಂದು**,** ದಿನಾಂಕ **09.09.1980** ರ

ಸ್ವೀಕೃತಿಯ ದೃಡೀಕೃತ ನಕಲನ್ನು ನಿ.ಡಿ **15** ಎಂದು, ಅಸಲು ದಾವಾ ಸಂಖ್ಯೆ **48/2008** ರ ತೀರ್ಪು ಮತ್ತು ಡಿಕ್ರಿಯ ದೃಡೀಕೃತ ನಕಲನ್ನು ನಿ.ಡಿ **16** ಮತ್ತು **17** ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಹಾಜರಿದ್ದು, ಕೋರಿಕೆಯ ಮೇರಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್ 67/2016
ಡಿಡಬ್ಲ್ಯೂ-1